ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2252
ಸದಸ್ಯರ ಹೆಸರು	ಶ್ರೀ ಎಸ್.ನಾಗರಾಜ್
ಉತ್ತರಿಸುವ ದಿನಾಂಕ	31-03-2020
ಉತ್ತರಿಸುವವರು	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ	ಚಾಮರಾಜನಗರದಲ್ಲಿ ಮುಚ್ಚಿಹೋಗಿರುವ ರೇಷ್ಮೆ ಕಾರ್ಖಾನೆಯ ಪುನಃಶ್ಚೇತನಕ್ಕೆ ಕೈಗೊಂಡಿರುವ ಕ್ರಮಗಳೇನು; ಕಳೆದ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ 5 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿರುವುದು ನಿಜವೇ; ಈ ರೇಷ್ಮೆ ಕಾರ್ಖಾನೆಯ ಪುನರಾರಂಭಕ್ಕೆ ಸರ್ಕಾರ ರೂಪಿಸಿರುವ ಯೋಜನೆಗಳೇನು:	2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುವ ಕಾರ್ಯಕ್ರಮಗಳಲ್ಲಿ ಚಾಮರಾಜನಗರದ ರೇಷ್ಮೆ ಕಾರ್ಖಾನೆಯನ್ನು ಪುನಃಶ್ಚೇತನ ಗೊಳಿಸಲು 2019-20ನೇ ಸಾಲಿನಲ್ಲಿ 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿತ್ತು. ಆದರೆ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದಲ್ಲಿ, ಭವಿಷ್ಯತ್ತಿನಲ್ಲಿ ಫಲಪ್ರದಾಯಕವಾಗುವ ಸಾಧ್ಯತೆಗಳು ಕಡಿಮೆ ಇರುವ ಅಂಶಗಳ ಹಿನ್ನಲೆಯಲ್ಲಿ ಸದರಿ ಕಾರ್ಯಕ್ರಮವನ್ನು ಸರ್ಕಾರದ ಆದೇಶ ಸಂಖ್ಯೆ: ತೋಇ 77 ರೇಕೃವಿ 2019 ದಿನಾಂಕ 22-11-2019ರನ್ವಯ ಕೈಬಿಡಲಾಗಿರುತ್ತದೆ.
ಆ	ಚಾಮರಾಜನಗರ ಜಿಲ್ಲೆ ಸಂತೇಮರಹಳ್ಳಿ ಯಲ್ಲಿರುವ ರೇಷ್ಮೆ ಕಾರ್ಖಾನೆಯ ಆಧುನೀಕರಣಕ್ಕೆ ಕೈಗೊಂಡಿರುವ ಕ್ರಮ ಗಳೇನು; ಕಳೆದ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ ಎರಡು ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿರುವುದು ನಿಜವೇ: ಈ ಅನುದಾನವನ್ನು ಬಿಡುಗಡೆ ಮಾಡಿ ಆಧುನೀಕರಣಕ್ಕೆ ಬಳಸಿ ಕೊಳ್ಳಲಾಗಿದೆಯೇ:	2019-20 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸಂತೇಮರಹಳ್ಳಿಯ ರೇಷ್ಮೆ ಕಾರ್ಖಾನೆಯಲ್ಲಿ ಹೊಸ ತಾಂತ್ರಿಕತೆಯ ರೀಲಿಂಗ್ ಯಂತ್ರೋಪಕರಣಗಳನ್ನು ಅಳವಡಿಸಿ, ಆ ಭಾಗದ ಯುವಜನರಿಗೆ ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಕೌಶಲ್ಯ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಉದ್ದೇಶಿಸಿದೆ, ಇದಕ್ಕಾಗಿ 2 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2019-20ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ರೂ.10.00 ಲಕ್ಷಗಳ ವಂಟನೆಯು ಬಿಡುಗಡೆಯಾಗಿರುತ್ತದೆ. ಕಾರ್ಯಕ್ರಮದ ಕ್ರಿಯಾಯೋಜನೆಯನ್ವಯ ರೇಷ್ಮೆ ಕಾರ್ಖಾನೆಯ ಆಧುನೀಕರಣಕ್ಕೆ ಸಿವಿಲ್ ಕಾಮಗಾರಿಗಳನ್ನು ಇಲಾಖೆಯ ಕಾಮಗಾರಿ ಕೋಶದಿಂದ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ.

----2

ಇ	ಸಂತೇಮರಹಳ್ಳಿ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ಉದ್ದಿಮೆಯಲ್ಲಿ ಯುವಕರಿಗೆ ತರಬೇತಿ ನೀಡಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ: ಇದ್ದಲ್ಲಿ, ವಿವರ ನೀಡುವುದು?	ಸಂತೇಮರಹಳ್ಳಿ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ಉದ್ದಿಮೆಯಲ್ಲಿ ಆಸಕ್ತಿ ತೋರುವ ಯುವಕರಿಗೆ ತರಬೇತಿ ನೀಡಲು 2020-21 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನಾಧರಿಸಿ ನೂತನ ರೀಲಿಂಗ್ ಯಂತ್ರೋಪಕರಣಗಳ ಸ್ಥಾಪನೆಯ ಮೂಲಕ ತರಬೇತಿ ನೀಡುವ ಕಾರ್ಯಕ್ರಮವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

ಸಂಖ್ಯೆ: ರೇಷ್ಮೆ 71 ರೇಕೃವಿ 2020

(ನಾರಾಯಣಗೌಡ)

ಪೌರಾಡಳಿತ ಹಾಗೂ ತೋಟಗಾರಿಕೆ

ಮತ್ತು ರೇಷ್ಮೆ ಸಚಿವರು